# ರಾಮಾನುಜನ್–ಜಾನಕಿ ಅಪೂರ್ಣ ಪ್ರೇಮಕಥೆ

## ರಾಮಾಯಣದ ಜಾನಕಿಗಿಂತಲೂ ರಾಮಾನುಜನ್‌ರ ಜಾನಕಿ ಹೆಚ್ಚು ಅಗ್ನಿಪರೀಕ್ಷೆಯನ್ನು ಎದುರಿಸಬೇಕಾಯಿತು

**‘ಸರಸ ಜನನ, ವಿರಸ ಮರಣ, ಸಮರಸವೇ ಜೀವನ’ ಎನ್ನುವ ಬೇಂದ್ರೆಯವರ ಮಾತು ದಾಂಪತ್ಯದ ಅದ್ಭುತ ವ್ಯಾಖ್ಯೆ. ಈ ಮಾತು ಜಗತ್ಪ್ರಸಿದ್ಧ ವಿಜ್ಞಾನಿಗಳ ದಾಂಪತ್ಯಕ್ಕೆ ಸಂಬಂಧಿಸಿದಂತೆ ಎಷ್ಟು ನಿಜ? ಅಸಾಧಾರಣ ವಿಜ್ಞಾನಿಗಳ ಖಾಸಗಿ ಬದುಕಿನಲ್ಲಿ ಇಣುಕುವ ಈ ದಾಂಪತ್ಯ ಮಾಲಿಕೆ ‘ವಿಜ್ಞಾನಿಗಳ ದಾಂಪತ್ಯ’, ವಿಜ್ಞಾನ ಜೀವನದೊಳಗಿನ ದಾಂಪತ್ಯಮೀಮಾಂಸೆ ಹಾಗೂ ದಾಂಪತ್ಯದೊಳಗೆ ವಿಜ್ಞಾನದ ಹುಡುಕಾಟದ ಕುತೂಹಲಕರ ಪ್ರಯತ್ನ.**

■ ಸಿಡ್ನಿ ಶ್ರೀನಿವಾಸ್



ವಿಶ್ವ ಗಣಿತಲೋಕಕ್ಕೆ ಭಾರತ ನೀಡಿರುವ ಅನನ್ಯ ಕೊಡುಗೆ ಶ್ರೀನಿವಾಸ ರಾಮಾನುಜನ್ (1887–1920). ಪಾಶ್ಚಾತ್ಯ ವಿದ್ವಾಂಸರೊಬ್ಬರು ಹೇಳಿರುವಂತೆ ‘ಐನ್‌ಸ್ಟೈನ್ ಗಣಿತಕ್ಕೆ, ಸಂಗೀತಕ್ಕೆ ಮೊಜಾರ್ಟ್ ಇದ್ದಂತೆ, ಗಣಿತಕ್ಕೆ ಶ್ರೀನಿವಾಸ ರಾಮಾನುಜನ್’.

ರಾಮಾನುಜನ್ ಹುಟ್ಟಿದ್ದು 1887ರಲ್ಲಿ, ತಮಿಳುನಾಡಿನ ಈರೋಡ್ ನಗರದಲ್ಲಿ. ಬಡ ಕುಟುಂಬ. ತಂದೆ ಕುಪ್ಪುಸ್ವಾಮಿ ಶ್ರೀನಿವಾಸ ಅಯ್ಯಂಗಾರ್, ತಾಯಿ ಕೋಮಲತಾ ಅಮ್ಮಾಳ್. ತಂದೆಗೆ ಸೀರೆಯಂಗಡಿಯಲ್ಲಿ ಗುಮಾಸ್ತನ ಕೆಲಸ. ತಾಯಿ ಮಗನ ಚಲನವಲನಗಳನ್ನಲ್ಲದೇ ಅವನ ಭವಿಷ್ಯವನ್ನೂ ನಿಯಂತ್ರಿಸಿದ್ದಳು. ರಾಮಾನುಜನ್‌ರ ಶಾಲಾಭ್ಯಾಸ ಕುಂಭಕೋಣಂನಲ್ಲಿ ಜರುಗಿತು. ಅಸಾಮಾನ್ಯ ಬಾಲಕ. ಸದಾ ತರಗತಿಗೆ ಮೊದಲು. ಹೀಗಾಗಿ ಕಾಲೇಜು ವಿದ್ಯಾರ್ಥಿ ವೇತನವೂ ದೊರೆಯಿತು.

ಶಾಲಾ ದಿನಗಳಲ್ಲೇ ರಾಮಾನುಜನ್ ಗಣಿತದಲ್ಲಿ ತಮ್ಮ ಹೆಗ್ಗಳಿಕೆಯನ್ನು ಪ್ರದರ್ಶಿಸಿದ್ದರು. ಕಾಲೇಜಿನಲ್ಲಿ ಅವರು ಗಣಿತವಲ್ಲದ ಎಲ್ಲಾ ವಿಷಯಗಳನ್ನೂ ನಿರ್ಲಕ್ಷಿಸಿದರು. ಹೀಗಾಗಿ ಪರೀಕ್ಷೆಯಲ್ಲಿ ನಪಾಸಾದರು. ಅವರನ್ನು ಚೆನ್ನೈನಲ್ಲಿದ್ದ ಮತ್ತೊಂದು ಕಾಲೇಜಿಗೆ ಸೇರಿಸಲಾಯಿತು. ಅಲ್ಲಿಯೂ ಅದೇ ರಾಗ. ಅಲ್ಲದೆ ಅವರ ಬಳಿ ಫೀಸ್ ಕೊಡಲು ಹಣವಿರಲಿಲ್ಲ. ಕಾಲೇಜಿನಿಂದ ಹೊರದೂಡಲಾಯಿತು. ಆಗವರು ಕುಂಭಕೋಣಂಗೆ ಹಿಂತಿರುಗಿದರು. ಸಮಯ ವ್ಯಯ ಮಾಡಲಿಲ್ಲ. ಐದು ವರ್ಷಗಳ ಕಾಲ ಮನೆಯ ಜಗುಲಿ ಮೇಲೆ ಕುಳಿತು ಗಣಿತದ ಅಭ್ಯಾಸ ಮುಂದುವರೆಸಿದರು. ಆ ಅವಧಿಯಲ್ಲಿ ನಿರೂಪಿಸಿದ ಗಣಿತ ಪ್ರಮೇಯಗಳು ‘Notebooks of Ramanujan’ ಎಂದು ಈಗ ವಿಶ್ವವಿಖ್ಯಾತವಾಗಿವೆ!

ಮಗನಿಗೆ 19 ವರ್ಷ ವಯಸ್ಸಾಯಿತು. ತಾಯಿ ಕೋಮಲತಾ ಅಮ್ಮಾಳ್ ಅವರಿಗೆ ಮದುವೆ ಮಾಡುವ ಹುಮ್ಮಸ್ಸು. ಕೆಲಸ, ಸಂಪಾದನೆ ಇರದ ಮಗನಿಗೆ ಮದುವೆ ಮಾಡುವುದು ತಂದೆಗೆ ಸ್ವಲ್ಪವೂ ಇಷ್ಟವಿರಲಿಲ್ಲ. ಗಂಡನ ಮಾತನ್ನು ಬದಿಗಿಟ್ಟು ತಾಯಿ ತನ್ನ ಸಂಬಂಧಿಯೊಬ್ಬರ ಮಗಳು, 9 ವಯಸ್ಸಿನ, ಜಾನಕಿಯ ಜಾತಕ ತರಿಸಿದರು. ಎಲ್ಲಾ ರೀತಿಯಲ್ಲೂ ಜಾತಕ ಕೂಡಿ ಮದುವೆ ನಿಶ್ಚಯವಾಯಿತು. 1909ರಲ್ಲಿ ನಡೆದ ಮದುವೆಯಲ್ಲಿ ಸಾಕಷ್ಟು ನಾಟಕಗಳಾದವು.

ಅದು ಜರುಗಿದ್ದು ರಾಜೇಂದ್ರಮ್ ಎಂಬ ಊರಿನಲ್ಲಿ. ಒಂದೇ ಮುಹೂರ್ತದಲ್ಲಿ ಜಾನಕಿ ಮತ್ತು ಅವರ ಅಕ್ಕ ವಿಜಯಲಕ್ಷ್ಮಿಯರ ಮದುವೆ ನಡೆಯುವುದಿತ್ತು. ಆದರೆ ರಾಮಾನುಜನ್ ಮತ್ತು ಇತರರು ಹೊರಟಿದ್ದ ರೈಲು ಹತ್ತಿರದ ಊರನ್ನು ಅತಿ ತಡವಾಗಿ ತಲುಪಿತು. ಮುಹೂರ್ತ ಮೀರಿದರೂ ಅವರು ಮದುವೆ ಮಂಟಪಕ್ಕೆ ಬರಲಿಲ್ಲ. ಅವರು ಅಲ್ಲಿ ತಲುಪಿದ್ದು ಮರುದಿನ ಮಧ್ಯಾಹ್ನ ಒಂದು ಗಂಟೆಗೆ.

ಕುಪಿತರಾದ ಜಾನಕಿಯ ತಂದೆ ಮಗಳನ್ನು ಮತ್ತಾರಿಗೋ ಕೊಡಲು ನಿರ್ಧರಿಸಿದರು. ಇದನ್ನರಿತ ಕೋಮಲತಾ ಅಮ್ಮಾಳ್ ಅವರೊಡನೆ ಕಿಡಿಕಾರಿ, ‘ನನ್ನ ಮಗ ಅತ್ಯಂತ ಮೇಧಾವಿ. ಅವನಿಗಿಂತ ಮಿಗಿಲಾದ ಗಂಡು ಇನ್ನಾರೂ ಇಲ್ಲ. ನಿನ್ನ ಮಗಳನ್ನು ಅವನಿಗೇ ಕೊಡಬೇಕು’ ಎಂದು ಪಟ್ಟುಹಿಡಿದರು. ಕೊನೆಗೂ ರಾಮಾನುಜನ್ ಮತ್ತು ಜಾನಕಿಯವರ ಮದುವೆ ನೆರವೇರಿತು. ಆದರೂ ಸಮಾರಂಭದಲ್ಲಿ ಸಾಕಷ್ಟು ಅಪಶಕುನಗಳಿದ್ದವು ಎಂಬುದನ್ನು ಜನ ದಾಖಲಿಸಿದ್ದಾರೆ. ಮೊದಲು ಜಾನಕಿಗೆ ಹಾಕಲಾಗಿದ್ದ ಹಾರ ಕಡಿದು ಬಿತ್ತು. ಸಭೆಯ ಹತ್ತಿರ ಯಾರೋ ಹುಚ್ಚ ಕೂಗಾಡುತ್ತಿದ್ದ. ಚಪ್ಪರಕ್ಕೆ ಬೆಂಕಿ ಬಿದ್ದಿತ್ತು.

ಮದುವೆಯಾಗಿ ಮೂರು ವರ್ಷಗಳ ನಂತರ ಜಾನಕಿ ಗಂಡನ ಮನೆಗೆ ಬಂದರು. ಆಗ ರಾಮಾನುಜನ್ ಎಲ್ಲೆಲ್ಲಿಯೋ ಅಲೆದು ಕೊನೆಗೆ ಚೆನ್ನೈನ ಬಂದರಿನಲ್ಲಿ ಒಂದು ಕೆಲಸ